# Government of Karnataka
# Deposition Sheet Form No. R.P. 57

## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಲಿಂಗಸಗೂರ

ಸಿ/ ಸಿ ನಂಬರಃ 294/2020

ಸಿ ಡಬ್ಲ್ಯೂ- 05
ಪಿ ಡಬ್ಲ್ಯೂ- 05

| | |
|---|---|
| ಸಾಕ್ಷಿದಾರರ ಹೆಸರು | ಃ- ನಿಂಗಪ್ಪ |
| ತಂದೆಯ ಹೆಸರು | ಃ- ಗಂಗಪ್ಪ |
| ವಯಸ್ಸು | ಃ- 38 ವರ್ಷ |
| ಉದ್ಯೋಗ | ಃ- ಪೋಲಿಸ್ ಪೇದೆ ಲಿಂಗಸುಗುರು ಪೋಲಿಸ್ ಠಾಣೆ |
| ವಾಸಸ್ಥಳ | ಃ- ಲಿಂಗಸುಗೂರು |

ದಿ.09-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ.**

ದಿನಾಂಕ 03-10-2016 ರಿಂದ 20-08-2020 ವರೆಗೆ ನಾನು ಪೋಲಿಸ್ ಪೇದೆಯಾಗಿ ಹಟ್ಟಿ ಪೋಲಿಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ 25-08-2019 ರಂದು ನಾನು ಹಟ್ಟಿ ಠಾಣೆಯಲ್ಲಿದ್ದಾಗ ಚಾ.ಸಾ-1 ರವರು ನನಗೆ ಲಿಮಗಸುಗುರು ಬಂದೋಬಸ್ತ್ ಹೋಗಬೇಕು ಎಂದು ಹೇಳೀದ್ದು ಠಾಣೆಯಲ್ಲಿದ್ದ ನಾನು ಹಟ್ಟಿ ಠಾಣೆಯ ಜೀಪ್ ನಂ.ಕೆಎ-36, ಜಿ-128 ನ ಚಾಲಕನಾಗಿದ್ದು ಲಿಂಗಸುಗೂರು ಬಂದೋಬಸ್ತ್ ಕುರಿತು ಹಟ್ಟಿಯಿಂದ 3-00 ಗಂಟೆಗೆ ಹೊರಟು ಮದ್ಯಾಹ್ನ 3-30 ಗಂಟೆಗೆ ಲಿಂಗಸುಗೂರು ಪೋಲಿಸ್ ಠಾಣೆಯ ಆವರಣಕ್ಕೆ ಬಂದು ನೋಡಲಾಗಿ 150-200 ಜನ ಸೇರಿದ್ದು ಕಂಡು ಬಂದಿರುತ್ತದೆ. ವಶಕ್ಕೆ ಪಡೆದುಕೊಂಡ ಆರೋಪಿ ಸೈಯದ್ ಈತನು ತನ್ನ ಫೇಸ್ ಬುಕ್ ಖಾತೆಯಲ್ಲಿ ಶಿವಾಜಿ, ಸಂಗೋಳ್ಳಿ ರಾಯಣ್ಣ ಮತ್ತು ವಾಲ್ಮಿಕಿ ರವರ ಭಾವಚಿತ್ರಗಳ ಮೇಲೆ ಟಿಪ್ಪುಸುಲ್ತಾನರವರು ಎಡಗಾಲನ್ನು ಶಿವಾಜಿಯವರ ತಲೆಯ ಮೇಲೆ ಇಟ್ಟಂತೆ ಭಾವಚಿತ್ರವನ್ನು ಸಾಮಾಜಿಕ ಜಾಲತಾನದಲ್ಲಿ ಹರಿ ಬಿಟ್ಟು ಹಿಂದೂ ಧರ್ಮದವರ ಭಾವನೆಗೆ ಧಕ್ಕೆಯುಂಟು ಮಾಡಿದ ಬಗ್ಗೆ ಕೇಸು ದಾಖಲಾಗಿತ್ತು. ಅವನ ಮೇಲೆ ಆಕ್ರೋಶಗೊಂಡ ಜನರು ನೀವು ಪೋಲಿಸರು ಕೇಸ್ ಮಾಡುತ್ತೀರಿ ಆಮೇಲೆ ಬಿಟ್ಟು ಬಿಡುತ್ತಿರಿ ಎಂದು ಅವನನ್ನು ನಮ್ಮ ವಶಕ್ಕೆ ಕೊಟ್ಟುಬಿಡಿ ಎಂದು ಕೂಗಾಡುತ್ತಿದ್ದರು. ಸ್ಥಳದಲ್ಲಿದ್ದ ಪಿಡ್ಡನಗೌಡ, ನಂದೀಶ ನಾಯಕರವರು ಜನರಿಗೆ ಅವನನ್ನು ಪೋಲಿಸರು ನ್ಯಾಯಾಂಗ ಬಂದನಕ್ಕೆ ಒಪ್ಪಿಸುತ್ತಾರೆ ನೀವು ಇಲ್ಲಿಂದ ಹೊರಟು ಬಿಡಿ ಎಂದು ಎಷ್ಟು ಸಾರಿ ಹೇಳಿದರೂ ಅವರು ಅಲ್ಲಿಂದ ಹೋಗಿರುವುದಿಲ್ಲ. ನಂತರ ಚಾ.ಸಾ-16

ರವರು ಸದರಿ ಆರೋಪಿಯ ನ್ಯಾಯಾಂಗ ಬಂದನಕ್ಕೆ ಒಪ್ಪಿಸಲು ನನಗೆ ಮತ್ತು ಚಾ.ಸಾ-1, 4, 7 ಮತ್ತು 8 ರವರಿಗೆ ಬೆಂಗಾವಲು ಕರ್ತವ್ಯಕ್ಕೆ ನೇಮಿಸಿರುತ್ತಾರೆ. ಸದರಿ ಆರೋಪಿಯನ್ನು ಕೆ.ಎ-36, ಜಿ-128 ಇಲಾಖಾ ವಾಹನದಲ್ಲಿ ಕರೆದುಕೊಂಡು ಹೋಗುತ್ತಿದ್ದಾಗ ಸಂಜೆ 4-30 ಕ್ಕೆ ಅರಣ್ಯ ಇಲಾಖೆಯ ಕಾರ್ಯಾಲಯದ ಮುಂದೆ ಸುಮಾರು 50-60 ಜನ ಸೇರಿ ನಮ್ಮ ಜೀಪನ್ನು ಅಡ್ಡಗಟ್ಟಿ ನಿಲ್ಲಿಸಿ ಅವನನ್ನು ನಮ್ಮ ವಶಕ್ಕೆ ಕೊಟ್ಟುಬಿಡಿ ಎಂದು ಲೇ ಸೂಳೆ ಮಕ್ಕಳೆ ಅವನನ್ನು ಎಲ್ಲಿಗೆ ಕರೆದಕೊಂಡು ಹೋಗುತ್ತಿದ್ದಿರಿ ಎಂದು ಅವಾಚ್ಯವಾಗಿ ಬೈದು ನಮ್ಮ ಕರ್ತವ್ಯಕ್ಕೆ ಅಡ್ಡಪಡಿಸಿರುತ್ತಾರೆ. ಅಲ್ಲಿಯೇ ಬಂದೋಬಸ್ತ ಕರ್ತವ್ಯದಲ್ಲಿದ್ದ ಚಾ.ಸಾ-9 ರಿಂದ 11 ರವರು ಸ್ಥಳಕ್ಕೆ ಬಂದು ಪ್ರತಿಭಟನೆ ಮಾಡುವುದು ಕಾನೂನು ಬಾಹಿರ ಎಂದು ತಿಳಿ ಹೇಳಿ ಗುಂಪನ್ನು ಚದುರಿಸಿರುತ್ತಾರೆ. ಅವರು ಮಾತನ್ನು ಕೇಳದೆ ಅಲ್ಲಿಯೇ ಇದ್ದ ಕಲ್ಲುಗಳನ್ನು ಜೀಪಿನ ಮೇಲೆ ಎಸೆದಿರುತ್ತಾರೆ. ಜೀಪಿನ ಹಿಂಬದಿ ಗ್ಲಾಸು ಒಡೆದು ಅದರಲ್ಲಿದ್ದ ಚಾ.ಸಾ-4 ರವರಿಗೆ ರಟ್ಟೆಗೆ ಮೂಕಪೆಟ್ಟಾಗಿರುತ್ತವೆ. ನನಗೆ ಕೈಗೆ ರಕ್ತಗಾಯವಾಗಿತ್ತು. ಚಾ.ಸಾ-7 ರವರಿಗೆ ಬಲಗೈ ಮುಂಗೈಗೆ ಗಾಯಗಳಾಗಿದ್ದವು. ಚಾ.ಸಾ-1 ರವರಿಗೂ ಸಹ ಅವರ ಸಮವಸ್ತ್ರ ಹಿಡಿದು ಎಳೆದಾಡಿರುತ್ತಾರೆ. ಆರೋಪಿಯ ಸುರಕ್ಷತೆ ದೃಷ್ಟಿಯಿಂದ ನಾವು ಠಾಣೆಗೆ ವಾಪಸ್ಸು ಕರೆದುಕೊಂಡು ಬಂದಿರುತ್ತೇವೆ. ನಂತರ ಸಂಜೆ 6-15 ಕ್ಕೆ ಘಟನೆಯ ಕುರಿತು ಲಿಂಗಸುಗೂರು ಪೋಲಿಸ್ ಠಾಣೆಯಲ್ಲಿ ಚಾ.ಸಾ-1 ರವು ದೂರು ಕೊಟ್ಟಿರುತ್ತಾರೆ.

3. ಅದೇ ದಿನ ಸಾರ್ವಜನಿಕರಿಂದ ಆರೋಪಿತರ ಹೆಸರುಗಳನ್ನು ಕೇಳಲಾಗಿ ದುರಗೇಶ ತಂದೆ ಸಣ್ಣಯಮನಪ್ಪ, ಯಮನೂರು ತಂದೆ ಪರಶುರಾಮ, ಗುಂಡಪ್ಪ ಮತ್ತು ಯಮನಪ್ಪ, ಚಂದಪ್ಪ ತಂದೆ ಓಬಣ್ಣ ಎಂದು ತಿಳಿದು ಬಂದಿರುತ್ತದೆ. ದಿನಾಂಕ 31-08-2019 ರಂದು ಲಿಂಗಸುಗುರು ಠಾಣೆಗೆ ಹಾಜರಾಗಿದ್ದು 1 ರಿಂದ 4 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತೇನೆ. ಚಾ.ಸಾ-1 ರವರ ಸಮವಸ್ತ್ರ ಹಿಡಿದು ಎಳೆದಾಡಿದ ತಿರುಪತಿ ಅವರ ಬಗ್ಗೆ ಮಾಹಿತಿ ತಿಳಿದು ಹೇಳಿಕೆ ಕೊಟ್ಟಿರುತ್ತೇನೆ. ದಿನಾಂಕ 05-09-2019 ರಂದು ಠಾಣೆಗೆ ಹಾಜರಾಗಿ ಇನ್ನೂಳಿದ ಆರೋಪಿಗಳಾದ ರವಿಕುಮಾರ, ಗಂಗಾಧರ, ತಿರುಪತಿ ಮತ್ತು ಕೇಶವ ವಿಡಿಯೋ ಚಿತ್ರಿಕರಣವನ್ನು ನೋಡಿ ಗುರುತಿಸಿ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1, 2, 4 ರಿಂದ 7 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. 3 ನೇ ಆರೋಪಿ ತಿರಿಕೊಂಡಿರುತ್ತಾನೆ. ಸಾಕ್ಷಿಯು ನಿ.ಪಿ-4 ರಿಂದ 7 ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಕಲ್ಲು ಮತ್ತು ಗಾಜಿನ ಚೂರುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮುದ್ದೇಮಾಲು-1 ಮತ್ತು 2 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲು: ಶ್ರೀ.ಎಸ್.ಹೆಚ್.ಜಿ ವಕೀಲರಿಂದ 1ನೇ ಆರೋಪಿಯ ಪರವಾಗಿ:-**

ಘಟನೆಯು ಅರಣ್ಯ ಇಲಾಖೆಯ ವಸತಿ ಗೃಹಗಳ ಮುಂದೆ ಕಸಬಾಲಿಂಗಸುಗೂರು-ರಾಯಚುರು ರಸ್ತೆಯಲ್ಲಿ ಆಗಿರುತ್ತದೆ. ಲಿಂಗಸುಗೂರು ಠಾಣೆಯಿಂದ ಎ.ಸಿ.ಕಚೇರಿಯ ರಸ್ತೆಯ ಮೂಲಕ ಆರೋಪಿಯನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಹೋಗುತ್ತಿದ್ದೇವು. ಆರೋಪಿತರು ರಾಯಚೂರು ರಸ್ತೆಯಿಂದ ಪೂರ್ವದಿಂದ ಬಂದು ನಮ್ಮ ಜೀಪನ್ನು ಅಡ್ಡಗಟ್ಟಿ ನಿಲ್ಲಿಸಿರುತ್ತಾರೆ. ಸದರಿ ಜೀಪಿನಲ್ಲಿ ನಾನು, ಚಾ.ಸಾ-1, 4 ಮತ್ತು 7 ರವರು ಇದ್ದೆವು. ಚಾಲಕನ ಪಕ್ಕದ ಆಸನದಲ್ಲಿ ಕುಳಿತಿದ್ದೆ. 25-30 ಜನ ಎಲ್ಲರೂ ಅವಾಚ್ಯವಾಗಿ ಬೈದಿರುತ್ತಾರೆ. ನಮ್ಮ ಜೀಪಿಗೆ ಇಂತಹ ಆರೋಪಿನೆ ಕಲ್ಲು ಎಸೆದಿದ್ದಾನೆ ಎಂದು ನನಗೆ ಹೇಳಲು ಆಗುವದಿಲ್ಲ. ಜೀಪಿಗೆ ಕಲ್ಲು ಎಸೆಯುವ ಸಮಯದಲ್ಲಿ ನಾನು ಕೆಳಗೆ ಇಳಿದು ಬಂದಿದ್ದೆ. ಕಲ್ಲು ಎಸೆಯುವ ಸಮಯದಲ್ಲಿ ನಾನು ಜೀಪಿನ ಒಳಗೆ ಇದ್ದೆ ಎಂದರೆ ಸರಿಯಲ್ಲ. ಕಲ್ಲು ಎಸೆದಿದ್ದರಿಂದ ಜೀಪಿನ ಹಿಂದಿನ ಗ್ಲಾಸ್ ಜಖಂಗೊಂಡಿದೆ ಎಂದರೆ ಸರಿ. ದೂರಿನಲ್ಲಿ ಜೀಪಿನ ಎಲ್ಲಾ ಗ್ಲಾಸ್ ಒಡೆದಿವೆ ಎಂದು ಹೇಳಿದ್ದು ಹಿಂದಿನ ಗ್ಲಾಸ್ ಎಂದು ನಾನು ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆದಕಾರಣ ನಾನು ಘಟನಾ ಸ್ಥಳದಲ್ಲಿ ಹಾಜರು ಇರಲಿಲ್ಲ ಎಂದರೆ ಸರಿಯಲ್ಲ. ಆ ದಿನ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಜೀಪನ್ನು ಅಡ್ಡಗಟ್ಟಿ ನಿಲ್ಲಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಶ್ರೀ.ಎಸ್.ಎಮ್.ಪಿ ವಕೀಲರಿಂದ 2 ರಿಂದ 4 ಮತ್ತು 6ನೇ ಆರೋಪಿತರ ಪರವಾಗಿ:-**

ಹಟ್ಟಿ ಪೋಲಿಸ್ ಠಾಣೆಯಿಂದ 3-00 ಗಂಟೆಗೆ ಹೊರಟು ಲಿಂಗಸುಗೂರು ಪೋಲಿಸ್ ಠಾಣೆಗೆ 3-30 ಕ್ಕೆ ಬಂದಿರುತ್ತೇವೆ. ಲಿಂಗಸುಗೂರು ಠಾಣೆಯಲ್ಲಿ ಸುಮಾರು 500-1000 ಸೇರಿದ್ದರು ಎಂದರೆ ಸಾಕ್ಷಿಯು 200-300 ಜನ ಸೇರಿರಬಹುದು ಎನ್ನುತ್ತಾರೆ. ಆರೋಪಿತರು ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿ ನಮ್ಮ ಇಲಾಖೆಯ ಜೀಪನ್ನು ಜಖಂ ಮಾಡಿದ್ದರಿಂದ ದೂರು ಕೊಟ್ಟಿರುತ್ತೇನೆ. ಆ ದಿನ ಗುನ್ನಾ ನಂ.201/2019 ಕ್ಕೆ ಸಂಬಂಧಿಸಿದಂತೆ ಆರೋಪಿಯನ್ನು ವಶಕ್ಕೆ ಪಡೆದಿದ್ದರಿಂದ ಈ ಘಟನೆ ನಡೆದಿರುತ್ತದೆ. ಸೈಯದರವರ ಮೇಲೆ ಕೇಸು ಆಗಿದ್ದರಿಂದ ಹಿಂದೂ ಧರ್ಮಕ್ಕೆ ಅವಮಾನವಾಗಿದ್ದರಿಂದ ಸುತ್ತ-ಮುತ್ತಲಿನ ಹಳ್ಳಿಯ ಸುಮಾರು 500-1000 ಜನ ಪೋಲಿಸ್ ಠಾಣೆಯ ಮುಂದೆ ಸೇರಿದ್ದರು ಎಂದರೆ ಸರಿಯಲ್ಲ. ನಮ್ಮ ಜೀಪಿಗೆ ಯಾರು ಕಲ್ಲು ಎಸೆದರು ಎಂದು ನಿಖರವಾಗಿ ಹೇಳಲಾಗುವದಿಲ್ಲ. ಆ ದಿನ ಸುಮಾರು 500-1000 ಜನ ಸೇರಿದ್ದು ನಿಜವಾದ ಆರೋಪಿತರನ್ನು ಗುರುತಿಸದೆ ಸ್ಥಳದಲ್ಲಿ ಸಣ್ಣ ವ್ಯಾಪಾರಿಗಳಾದ ಹಣ್ಣು, ತರಕಾರಿ ಮತ್ತು ಮೀನಿನ ವ್ಯಾಪಾರಿಗಳ ವಿರುದ್ದ ಸುಳ್ಳು ದೂರು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರ

ಪೈಕಿ ಯಮನೂರು ಗೌಂಡಿ ಕೆಲಸ ಮಾಡುತ್ತಿದ್ದಾರೆ. ಉಳಿದ ಆರೋಪಿತರು ಏನು ಕೆಲಸ ಮಾಡುತ್ತಿದ್ದಾರೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ನಿಜವಾದ ಆರೋಪಿತರನ್ನು ಗುರುತಿಸದೆ ಅಮಾಯಕರ ವಿರುದ್ದ ಸುಳ್ಳು ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. ಘಟನೆ ಸಾರ್ವಜನಿಕ ಸ್ಥಳದಲ್ಲಿ ನಡೆದಿದೆ ಎಂದರೆ ಸರಿ. ನನ್ನ ಹೇಳಿಕೆಯಲ್ಲಿ 25-30 ಜನ ಸೇರಿದ್ದರು ಎಂದು ಹೇಳಿದ್ದು ಅವರು ಯಾರು ಎಂದು ನನಗೆ ನಿಖರವಾಗಿ ಗುರತಿಸಲು ಆಗುವದಿಲ್ಲ. ಸ್ಥಳದಲ್ಲಿ ಸೇರಿದ ಸಾರ್ವಜನಿಕರನ್ನುಎಣಿಕೆ ಮಾಡಲಾಗಲಿಲ್ಲ. ಜೀಪಿಗೆ ಯಾರು ಕಲ್ಲು ಎಸಿದಿದ್ದರು ಎಂದು ನನಗೆ ನಿಖರವಾಗಿ ಹೇಳಲಾಗುವದಿಲ್ಲ. ಯಾರ ಕೈಯಲ್ಲಿ ಕಟ್ಟಿಗೆ ಇತ್ತುಯಾರ ಕೈಯಲ್ಲಿ ಕಲ್ಲು ಇತ್ತು ಎಂದು ಗಲಬೆ ಸಂದರ್ಭದಲ್ಲಿ ನೋಡಲಾಗಲಿಲ್ಲ.

2. ಆ ದಿನ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಜೀಪನ್ನು ಅಡ್ಡಗಟ್ಟಿ ನಿಲ್ಲಿಸಿಲ್ಲ ಪೋಲಿಸರಿಗೆ ಯಾವುದೇ ಗಾಯಗಳಾಗಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ಆರೋಪಿತರ ವಿರುದ್ದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಶ್ರೀ.ಹೆಚ್.ಬಿ ವಕೀಲರಿಂದ 7 ನೇ ಆರೋಪಿಯ ಪರವಾಗಿ:-**

ಮೇಲಿನ ಸವಾಲನ್ನು ಅಳವಡಿಸಿಕೊಳ್ಳಲು ಕೋರಿದ್ದು ಅನುಮತಿಸಲಾಯಿತು.

*(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)*

ಓ. ಹೇ. ಕೇ. ಸರಿ ಇದೆ.
ಸಹಿ/-

ಪ್ರಧಾನ ಸಿವಿಲ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.